**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ : ಸಿ5(4)ಶಿಕ್ಷಣ ಅದಾಲತ್/2015-16 ದಿನಾಂಕ:19-09-2015

# ಜ್ಞಾಪನ

ವಿಷಯ: 2015-16ನೇ ಸಾಲಿನಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಶಿಕ್ಷಣ ಅದಾಲತ್ ಕಾರ್ಯಕ್ರಮವನ್ನು ಏರ್ಪಡಿಸುವ ಬಗ್ಗೆ.

--

ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ 2015-16ನೇ ಸಾಲಿನಲ್ಲಿ ಶಿಕ್ಷಣ ಅದಾಲತ್ ಕಾರ್ಯಕ್ರಮವನ್ನು ಬೆಂಗಳೂರು ಆಯುಕ್ತಾಲಯದ ವ್ಯಾಪ್ತಿಗೆ ಬರುವ ಎಲ್ಲಾ ಶೈಕ್ಷಣಿಕ ಜಿಲ್ಲೆಗಳಲ್ಲಿ ಈ ಕೆಳಕಂಡ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಂದು ಶಿಕ್ಷಣ ಅದಾಲತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಆಯಾ ಜಿಲ್ಲಾ ಉಪನಿರ್ದೇಶಕರು ತಮ್ಮ ಜಿಲ್ಲೆಯ ವ್ಯಾಪ್ತಿಗೆ ಬರುವಂತಹ ಉಪನಿರ್ದೇಶಕರ ಕಛೇರಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಬಾಕಿ ಇರುವ ಕಡತಗಳನ್ನು ನಿಯಮಾನುಸಾರ ಪರಿಶೀಲಿಸಿ, ತ್ವರಿತವಾಗಿ ಇತ್ಯರ್ಥಪಡಿಸಲು ಕ್ರಮ ತೆಗೆದುಕೊಳ್ಳಲು ತಿಳಿಸಿದೆ.

ಈ ಶಿಕ್ಷಣ ಅದಾಲತ್‌ಗೆ ಆಯುಕ್ತರು ಖುದ್ದಾಗಿ ಹಾಜರಿದ್ದು ಕಡತಗಳನ್ನು ವಿಲೇವಾರಿ ಮಾಡುವುದಲ್ಲದೇ ಸಾರ್ವಜನಿಕರಿಂದ ಬರುವಂತಹ ಅಹವಾಲುಗಳ ಬಗ್ಗೆ ಸ್ಥಳದಲ್ಲಿಯೇ ಸೂಕ್ತ ಕ್ರಮ ಕೈಗೊಳ್ಳುವರು.

| ಕ್ರ ಸಂ | ಜಿಲ್ಲೆಯ ಹೆಸರು | ಶಿಕ್ಷಣ ಅದಾಲತ್ ದಿನಾಂಕ | ನೋಡಲ್ ಅಧಿಕಾರಿಯ ಹೆಸರು | ಷರಾ |
|---|---|---|---|---|
| 1 | ಬೆಂಗಳೂರು ಗ್ರಾಮಾಂತರ | 04-08-2015 | ಪ್ರಾಂಶುಪಾಲರು, ಸಿ.ಟಿ.ಇ. ಚಿತ್ರದುರ್ಗ. | ಅದಾಲತ್ ನಡೆಸಲಾಗಿದೆ |
| 2 | ಮಧುಗಿರಿ | 14-09-2015 | ನಿರ್ದೇಶಕರು(ಆರ್.ಎಂ.ಎಸ್.ಎ) | ಅದಾಲತ್ ನಡೆಸಲಾಗಿದೆ |
| 3 | ಮಂಡ್ಯ | 23-09-2015 | ಸಹ ನಿರ್ದೇಶಕರು, ಮೈಸೂರು ವಿಭಾಗ | |
| 4 | ಬೆಂಗಳೂರು ದಕ್ಷಿಣ | 28-09-2015 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | |
| 5 | ಬೆಂಗಳೂರು ಉತ್ತರ | 03-10-2015 | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ | |
| 6 | ಕೋಲಾರ | 07-10-2015 | ನಿರ್ದೇಶಕರು(ಪ್ರೌಢ ಶಿಕ್ಷಣ) | |
| 7 | ಚಿತ್ರದುರ್ಗ | 29-10-2015 | ಪ್ರಾಂಶುಪಾಲರು, ಸಿ.ಟಿ.ಇ. ಮೈಸೂರು | |
| 8 | ದಾವಣಗೆರೆ | 04-11-2015 | ನಿರ್ದೇಶಕರು, (ಡಿ ಎಸ್ ಇ ಆರ್ ಟಿ) | |
| 9 | ಶಿವಮೊಗ್ಗ | 13-11-2015 | ನಿರ್ದೇಶಕರು, ಪರೀಕ್ಷೆಗಳು | |
| 10 | ಚಾಮರಾಜನಗರ | 18-11-2015 | ನಿರ್ದೇಶಕರು, ಇತರೆ ಪರೀಕ್ಷೆಗಳು | |
| 11 | ಹಾಸನ | 24-11-2015 | ಸಹ ನಿರ್ದೇಶಕರು, ಮಧ್ಯಾಹ್ನ ಉಪಹಾರ ಯೋಜನೆ | |

| | | | | |
|---|---|---|---|---|
| 12 | ಕೊಡಗು | 25-11-2015 | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯ ಪುಸ್ತಕ ಸೊಸೈಟಿ | |
| 13 | ಉಡುಪಿ | 02-12-2015 | ಕಾರ್ಯದರ್ಶಿಗಳು, ಕ ಪ್ರೌ ಶಿ ಪ ಮಂಡಳಿ | |
| 14 | ಮಂಗಳೂರು | 09-12-2015 | ನಿರ್ದೇಶಕರು, ಅಲ್ಪಸಂಖ್ಯಾತ ಶಿಕ್ಷಣ | |
| 15 | ಚಿಕ್ಕಮಗಳೂರು | 16-12-2015 | ಸಹ ನಿರ್ದೇಶಕರು, ಬೆಂಗಳೂರು ವಿಭಾಗ | |
| 16 | ತುಮಕೂರು | 22-12-2015 | ಸಹ ನಿರ್ದೇಶಕರು (ಡಿ ಎಸ್ ಇ ಆರ್ ಟಿ) | |
| 17 | ಚಿಕ್ಕಬಳ್ಳಾಪುರ | 29-12-2015 | ನಿರ್ದೇಶಕರು(ಪ್ರಾಥಮಿಕ ಶಿಕ್ಷಣ) | |
| 18 | ರಾಮನಗರ | 06-01-2016 | ಅಪರ ಆಯುಕ್ತರು(ಆಡಳಿತ) | |
| 19 | ಮೈಸೂರು | 13-01-2016 | ಸಹ ನಿರ್ದೇಶಕರು, ಶಾಲಾ ಶಿಕ್ಷಣ | |

ಆಯಾ ಜಿಲ್ಲೆಯ ಉಪನಿರ್ದೇಶಕರು ತಕ್ಷಣದಿಂದ ತಮ್ಮ ಜಿಲ್ಲೆಯ ವ್ಯಾಪ್ತಿಗೆ ಬರುವ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಬಾಕಿ ಇರುವ ಕಡತಗಳ ವಿಲೇವಾರಿ ಬಗ್ಗೆ ತ್ವರಿತ ಕ್ರಮ ಕೈಗೊಳ್ಳುವುದು. ಹಾಗೆಯೇ ಉಪನಿರ್ದೇಶಕರುಗಳ ಕಛೇರಿಗಳಲ್ಲಿ ಬಾಕಿ ಇರುವಂತಹ ಕಡತಗಳನ್ನು ನಿಯಮಾನುಸಾರ ವಿಲೇವಾರಿಗೆ ಕ್ರಮವಹಿಸಲು ತಿಳಿಸಿದೆ. ಈ ಕಛೇರಿಯಿಂದ ಬಾಕಿ ಇರುವಂತಹ ಕಡತಗಳ ಬಗ್ಗೆ ತ:ಖ್ತೆಯನ್ನು ತಯಾರಿಸಿ, ಸಂಬಂಧಿಸಿದ ಓರ್ವ ಅಧೀಕ್ಷಕರ ಮುಖೇನ ಆಯಾ ಜಿಲ್ಲೆಗೆ ಶಿಕ್ಷಣ ಅದಾಲತ್ ನಿಗದಿಪಡಿಸಿರುವ ದಿನಾಂಕದೊಳಗೆ ತಲುಪಿಸುವಂತೆ ತಿಳಿಸಿದೆ. ಯಾವುದೇ ಕಾರಣಕ್ಕೂ ಅನಗತ್ಯವಾಗಿ ಕಡತಗಳು ಬಾಕಿ ಇರದಂತೆ ಸೂಕ್ತ ಕ್ರಮವಹಿಸಲು ಸೂಚಿಸಲಾಗಿದೆ.

ಸರ್ಕಾರ ದಿನಾಂಕ: 21-11-2013ರಂದು ಪ್ರತಿ ಶೈಕ್ಷಣಿಕ ಜಿಲ್ಲೆಗೆ ನೋಡಲ್ ಅಧಿಕಾರಿಯನ್ನಾಗಿ ನೇಮಿಸಿರುವ ಅಧಿಕಾರಿಗಳನ್ನೇ ಶಿಕ್ಷಣ ಅದಾಲತ್ ಕಾರ್ಯಕ್ರಮಕ್ಕೆ ನೋಡಲ್ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ. ಸದರಿ ಅಧಿಕಾರಿಗಳು ನಿಗದಿಪಡಿಸಿರುವ ಆಯಾ ಜಿಲ್ಲೆಗಳ ಶಿಕ್ಷಣ ಅದಾಲತ್ ಕಾರ್ಯಕ್ರಮದ ದಿನಾಂಕಕ್ಕಿಂತ ಮುನ್ನವೇ ಆಯಾ ಜಿಲ್ಲೆಗಳಿಗೆ ಭೇಟಿ ನೀಡಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರು ಶಿಕ್ಷಣ ಅದಾಲತ್ ಕಾರ್ಯಕ್ರಮದ ಬಗ್ಗೆ ಕೈಗೊಂಡಿರುವ ಕ್ರಮದ ಬಗ್ಗೆ ವಿಮರ್ಶಿಸಿ ವಿಮರ್ಶಿಸಿ ಪರಿಪೂರ್ಣವಾದ ವರದಿಯನ್ನು ಶಿಕ್ಷಣ ಅದಾಲತ್ ದಿನಾಂಕದಂದು ಆಯುಕ್ತರಿಗೆ ನೀಡುವಂತೆ ತಿಳಿಸಿದೆ.

ಮೇಲೆ ಕೈಗೊಳ್ಳಲಾದ ಶಿಕ್ಷಣ ಅದಾಲತ್ ಕಾರ್ಯಕ್ರಮ ನಿಗದಿಪಡಿಸಿದ ದಿನಾಂಕಗಳಲ್ಲಿ ಬೆಳಿಗ್ಗೆ 9-00 ರಿಂದ ಮದ್ಯಾಹ್ನ 2 ಘಂಟೆಯವರೆಗೆ ಬಾಕಿ ಇರುವ ಕಡತಗಳನ್ನು ವಿಲೇವಾರಿಗಾಗಿ ಕ್ರಮ ಕೈಗೊಳ್ಳಲು ಸಮಯ ನಿಗದಿಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಅಂದು ಸಾರ್ವಜನಿಕರಿಗೆ ಹಾಗೂ ಶಾಲಾ ಆಡಳಿತ ಮಂಡಳಿಯವರು ಆಯುಕ್ತರಿಗೆ ಅರ್ಜಿಗಳನ್ನು ನೀಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಆಯಾ ಜಿಲ್ಲೆಯಲ್ಲಿ ವ್ಯಾಪಕ ಪ್ರಚುರ ಪಡಿಸಲು ಕ್ರಮ ಕೈಗೊಳ್ಳಲು ತಿಳಿಸಿದೆ ಹಾಗೂ ಈ ಕೆಳಕಂಡ ವಿಷಯಗಳ ಕುರಿತು ಬಾಕಿ ಇರುವ ಕಡತಗಳನ್ನು ಇತ್ಯರ್ಥಪಡಿಸಲು ಅಗತ್ಯ ಕ್ರಮ ವಹಿಸುವುದು :

1) ಪಿಂಚಣಿ ಸೌಲಭ್ಯ ಕುರಿತು
2) ಸ್ಕಾಲರ್‌ಶಿಪ್‌ಗಾಗಿ ಸಲ್ಲಿಸಿರುವ ಅರ್ಜಿಗಳು
3) ಪುಸ್ತಕ ವಿತರಣೆ
4) ಸಮವಸ್ತ್ರ
5) ಬೈಸಿಕಲ್ ವಿತರಣೆ
6) ಮದ್ಯಾಹ್ನ ಉಪಹಾರ ಯೋಜನೆ/ಕ್ಷೀರಭಾಗ್ಯ

7) ಜಿಲ್ಲೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳ ವಿವರ ಹಾಗೂ ಮುಖ್ಯವಾಹಿನಿಗೆ ಕರೆತರಲು ಕೈಗೊಂಡ ಕ್ರಮ

8) ಆರ್.ಎಂ.ಎಸ್.ಎ ಯೋಜನೆಯ ಸಿವಿಲ್ ಕಾಮಗಾರಿ

9) ಎಸ್.ಎಸ್.ಎ ಯೋಜನೆಯ ಸಿವಿಲ್ ಕಾಮಗಾರಿ

10) ವರ್ಗಾವಣೆಗೊಂಡಿರುವ ಶಿಕ್ಷಕರ ವಿವರ (ಘಟಕದ ಒಳಗೆ/ಘಟಕದ ಹೊರಗೆ)

11) ಹೆಚ್ಚುವರಿ ಶಿಕ್ಷಕರ ವಿವರ

12) ಖರೀದಿ ಪುಸ್ತಕದ ಹಣ ವಸೂಲಾತಿ

13) ಕಾಂಪೌಂಡ್ ನಿರ್ಮಾಣ

14) ಶೌಚಾಲಯ ವ್ಯವಸ್ಥೆ

15) ಕುಡಿಯುವ ನೀರಿನ ಸೌಕರ್ಯ ಒದಿಗಿಸಿರುವ ಶಾಲೆಗಳ ವಿವರ

16) ವೇತನ ಅನುದಾನಕ್ಕೆ ಒಳಪಡಿಸುವ ಪ್ರಸ್ತಾವನೆಗಳು

17) ಅನುಕಂಪದ ಆಧಾರದ ಮೇಲೆ ನೇಮಕಾತಿಗಾಗಿ ಬಂದಿರುವ ಪ್ರಕರಣಗಳು

18) ವೈದ್ಯಕೀಯ ಬಿಲ್ಲುಗಳು ಮರುಪಾವತಿಗಾಗಿ ಬಂದಿರುವ ಪ್ರಕರಣಗಳು

19) ಸರ್ವೀಸ್ ರಿಜಿಸ್ಟರ್ ಕಾಣೆಯಾಗಿರುವ ಪ್ರಕರಣಗಳು

20) ಸರ್ವೀಸ್ ರಿಜಿಸ್ಟರ್‌ಗಳಲ್ಲಿ ಎಲ್ಲಾ ದಾಖಲೆಗಳನ್ನು ಭರ್ತಿ ಮಾಡಿರಬೇಕು

21) ಸೇವಾಪುಸ್ತಕದಲ್ಲಿರುವ ಸೇವಾ ಮಾಹಿತಿಯನ್ನು ಹೆಚ್.ಆರ್.ಎಂ.ಎಸ್ ತಂತ್ರಾಂಶದಲ್ಲಿ ಅಳವಡಿಸಿರುವ ಬಗ್ಗೆ

22) ಹಸ್ತಾಂತರಗೊಂಡಿರುವ ಶಾಲೆಗಳ ಸಂಖ್ಯೆ/ವಿವರು

23) ಶಾಲಾ ಆಡಳಿತ ಮಂಡಳಿಯು ಬದಲಾವಣೆಯಾಗಿರುವ ಪ್ರಕರಣಗಳು

24) ಆಂಗ್ಲ ಮಾಧ್ಯಮದಲ್ಲಿ ಶಾಲೆಗಳನ್ನು ಪ್ರಾರಂಭಿಸಲು ಬಂದಿರುವ ಪ್ರಕರಣಗಳು

25) 2015-16ನೇ ಸಾಲಿಗೆ ಉಪನಿರ್ದೇಶಕರ ಕಛೇರಿ ಹಂತದಲಿ 1 ರಿಂದ 5ನೇ ತರಗತಿಗೆ ಹೊಸ ಶಾಲೆಗಳಿಗೆ ಅನುಮತಿ ನೀಡಲು ಬಂದಿರುವ ಪ್ರಸ್ತಾವನೆಗಳು, ಪುರಸ್ಕರಿಸಿದ ಹಾಗೂ ತಿರಸ್ಕೃತಗೊಂಡ ಪ್ರಕರಣಗಳು.

26) ' ಸಕಾಲ ' ದಡಿಯಲ್ಲಿ ಬಾಕಿ ಇರುವ ಪ್ರಕರಣಗಳು

27) ಇ-ಸಚಿವಾಲಯ ವಾಹಿನಿ ತಂತ್ರಾಂಶವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಉಪನಿರ್ದೇಶಕರ ಕಛೇರಿಯಲ್ಲಿ ಅಳವಡಿಸಿ ಕಡತ ಚಾಲನೆ ಮಾಡುತ್ತಿರುವ ಮಾಹಿತಿ.

19/9/15

(ಕೆ.ಎಸ್. ಸತ್ಯಮೂರ್ತಿ)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ

ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ,

1. ಅಪರ ಆಯುಕ್ತರು(ಆಡಳಿತ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
2. ನಿರ್ದೇಶಕರು(ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

3. ನಿರ್ದೇಶಕರು(ಪ್ರಾಥಮಿಕ ಶಿಕ್ಷಣ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4. ನಿರ್ದೇಶಕರು(ಅಲ್ಪಸಂಖ್ಯಾತ), ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
5. ನಿರ್ದೇಶಕರು(ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಬೆಂಗಳೂರು
6. ನಿರ್ದೇಶಕರು(ಇತರೆ ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ
7. ಪರೀಕ್ಷಾ ಮಂಡಳಿ, ಬೆಂಗಳೂರು
8. ನಿರ್ದೇಶಕರು(ಡಿ.ಎಸ್.ಇ.ಆರ್.ಟಿ), ಬೆಂಗಳೂರು
9. ನಿರ್ದೇಶಕರು, ಎಸ್ ಎಸ್ ಎ, ಬೆಂಗಳೂರು
10. ನಿರ್ದೇಶಕರು, ಆರ್.ಎಂ.ಎಸ್.ಎ, ಬೆಂಗಳೂರು
11. ವ್ಯವಸ್ಥಾಪಕ ನಿರ್ದೇಶಕರು(ಪಠ್ಯ ಪುಸ್ತಕ), ಬೆಂಗಳೂರು
12. ಸಹ ನಿರ್ದೇಶಕರು, ಮಧ್ಯಾಹ್ನದ ಉಪಹಾರ ಯೋಜನೆ, ಬೆಂಗಳೂರು
13. ಸಹ ನಿರ್ದೇಶಕರು, ಬೆಂಗಳೂರು ವಿಭಾಗ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
14. ಸಹ ನಿರ್ದೇಶಕರು, ಶಾಲಾ ಶಿಕ್ಷಣ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
15. ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಮೈಸೂರು ವಿಭಾಗ, ಮೈಸೂರು. ಮೈಸೂರು ವಿಭಾಗ,
16. ಕಾರ್ಯದರ್ಶಿಗಳು, ಕ ಪ್ರೌ ಶಿ ಪ ಮಂಡಳಿ, ಬೆಂಗಳೂರು
17. ಪ್ರಾಂಶುಪಾಲರು. ಸಿ.ಟಿ.ಇ. ಮೈಸೂರು
18. ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ
19. ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ
20. ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ
21. ಈ ಕಛೇರಿಯ ಎಲ್ಲಾ ಶಾಖಾಧಿಕಾರಿಗಳು ಹಾಗೂ ಅಧೀಕ್ಷಕರುಗಳಿಗೆ
22. ಆಪ್ತ ಕಾರ್ಯದರ್ಶಿಗಳು, ಆಯುಕ್ತರ ಆಪ್ತ ಶಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು